ರಾಣೆಕೆರೆ ಫೀಡರ್ ಚಾನಲ್ ಅಭಿವೃದ್ಧಿ

53 (127) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ):– ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಳ್ಳಕೆರೆ ವ್ಯಾಪ್ತಿಯಲ್ಲಿ ಬರುವ ರಾಣೆಕೆರೆಗೆ ವೇದಾವತಿ ನದಿಯಿಂದ ನಿರ್ಮಿಸಲಾಗಿರುವ ಫೀಡರ್ ಚಾನೆಲ್ ನಿರ್ಮಿಸಿ ಎಷ್ಟು ವರ್ಷಗಳಾಯಿತು.

ಆ) ಇದರಿಂದ ರಾಣೆಕೆರೆಗೆ ನೀರು ಸರಬರಾಜು ಆಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ 4 ವರ್ಷದಿಂದ ಈ ರಾಣೆಕೆರೆ ಫೀಡರ್ ಚಾನೆಲ್ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲು ಕೋರಿಕೆ ಸಲ್ಲಿಸಿದ್ದರು ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಚಳ್ಳಕೆರೆ ವ್ಯಾಪ್ತಿಯಲ್ಲಿ ಬರುವ ರಾಣೆಕೆರೆಗೆ ವೇದಾವತಿ ನದಿಯಿಂದ ನಿರ್ಮಿಲಾಗಿರುವ ಫೀಡರ್ ಚಾನಲ್ ನಿರ್ಮಾಣವನ್ನು 1977–78ನೇ ಆರ್ಥಿಕ ವರ್ಷದಲ್ಲಿ ಮೊದಲನೇ ಹಂತದ ಕಾಮಗಾರಿಯನ್ನು ಪ್ರಾರಂಭಿಸಿ, 1997–98ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲಾಗಿರುತ್ತದೆ.

ಆ) ಬಂದಿರುತ್ತದೆ.

ಇ) ರಾಣೆಕೆರೆ ಪೂರಕ ನಾಲೆಯ ವಿವರವಾದ ಯೋಜನಾ ವರದಿ ಸಿದ್ದಪಡಿಸಿದ್ದು, ಆಡಳಿತಾತ್ಮಕ ಅನುಮೋದನೆ ನೀಡಿ ನಂತರ ಕರ್ನಾಟಕ ನೀರಾವರಿ ನಿಗಮದ ಪ್ರಸ್ತುತ ಸಾಲಿನ ಅನುದಾನದ ಅಡಿಯಲ್ಲಿ ಕೂಡಲೇ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

ಅಮಾನತುಪಡಿಸಿಕೊಳ್ಳಲಾದ ವಾಹನಗಳ ವಿವರ

56 (4) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಪ್ರಕಾರ ಸರ್ಕಾರದ ಪರ 2009–10 ಮತ್ತು 2010–11ರ ಸಾಲಿನಲ್ಲಿ ಅರಣ್ಯ ಇಲಾಖೆಯು ಅಮಾನತು ಪಡಿಸಿಕೊಳ್ಳಲಾದ ಎಷ್ಟು ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಆ) ಈ ರೀತಿ ಮುಟ್ಟುಗೋಲು ಹಾಕಿಕೊಳ್ಳಲಾದ ಎಷ್ಟು ವಾಹನಗಳನ್ನು ಬಹಿರಂಗ ಹರಾಜು/ಏಲಂ ಮೂಲಕ ವಿಲೇವಾರಿ ಮಾಡಲಾಗಿದೆ ಹಾಗೂ ಇದರಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಸಿ. ಪಿ. ಯೋಗೇಶ್ವರ (ಅರಣ್ಯ ಸಚಿವರು):–

ಅ) ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಪ್ರಕಾರ ಸರ್ಕಾರದ ಪರ 2009–10 ಮತ್ತು 2010–11ರ ಸಾಲಿನಲ್ಲಿ ಅರಣ್ಯ ಇಲಾಖೆಯ ಅಮಾನತ್ತು ಪಡಿಸಿಕೊಳ್ಳಲಾದ ವಾಹನಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಂಡ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	*ವರ್ಷ*		*ಅಮಾನತ್ತು ಪಡಿಸಿದ ವಾಹನಗಳ ಸಂಖ್ಯೆ*	*ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಂಡ ವಾಹನಗಳ ವಿವರ*	*ಷರಾ*
1	2009–10		470	152	
2	2010–11		366	152	
		ಒಟ್ಟು	836	304	

ಆ) ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲಾದ 329 (ಹಿಂದಿನ ಸಾಲಿನ ವಾಹನಗಳು ಸೇರಿ) ವಾಹನಗಳನ್ನು ಬಹಿರಂಗ ಹರಾಜು (ಏಲಂ) ಮೂಲಕ ವಿಲೇವಾರಿ ಮಾಡಲಾಗಿದೆ ಹಾಗೂ ಇದರಿಂದ ಸರ್ಕಾರಕ್ಕೆ ಬಂದ ಆದಾಯದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

2009–10 ಹಾಗೂ 2010–11ರಲ್ಲಿ ಬಹಿರಂಗ ಹರಾಜು (ಏಲಂ) ಮೂಲಕ ವಾಹನಗಳನ್ನು ವಿಲೇವಾರಿ ಮಾಡಿರುವ ಹಾಗೂ ಸರ್ಕಾರಕ್ಕೆ ಬಂದ ಒಟ್ಟು ಆದಾಯದ ವಿವರ (ವೃತ್ತವಾರು)

ಕ್ರ. ಸಂ.	*ವರ್ಷ*	*ವೃತ್ತದ ಹೆಸರು*	*ಹರಾಜು ಹಾಕಲಾದ ಒಟ್ಟು ವಾಹನಗಳ ಸಂಖ್ಯೆ*	*ಸರ್ಕಾರಕ್ಕೆ ಬಂದ ಒಟ್ಟು ಆದಾಯ (ರೂ.ಗಳಲ್ಲಿ)*
1		ಬೆಂಗಳೂರು	–	–
2		ಬೆಳಗಾಂ	–	–
3		ಬಳ್ಳಾರಿ	–	–
4		ಚಾಮರಾಜನಗರ	–	–
5		ಚಿಕ್ಕಮಗಳೂರು	15	3,90,114
6		ಧಾರವಾಡ	12	7,35,455
7		ಗುಲ್ಬರ್ಗಾ	–	–
8		ಹಾಸನ	–	–
9		ಕೆನರಾ	6	1,43,581
10		ಕೊಡಗು	29	15,73,400
11		ಮಂಗಳೂರು	9	4,31,313
12		ಮೈಸೂರು	13	2,42,305
13		ಶಿವಮೊಗ್ಗ	49	17,02,300
		ಒಟ್ಟು	**133**	**52,18,468**

ಕ್ರ. ಸಂ.	*ವರ್ಷ*	*ವೃತ್ತದ ಹೆಸರು*	*ಹರಾಜು ಹಾಕಲಾದ ಒಟ್ಟು ವಾಹನಗಳ ಸಂಖ್ಯೆ*	*ಸರ್ಕಾರಕ್ಕೆ ಬಂದ ಒಟ್ಟು ಆದಾಯ (ರೂ.ಗಳಲ್ಲಿ)*
1		ಬೆಂಗಳೂರು	–	–
2		ಬೆಳಗಾಂ	–	–
3		ಬಳ್ಳಾರಿ	–	–
4		ಚಾಮರಾಜನಗರ	ಇಲ್ಲ	ಇಲ್ಲ
5		ಚಿಕ್ಕಮಗಳೂರು	16	7,41,430
6		ಧಾರವಾಡ	29	14,31,012
7		ಗುಲ್ಬರ್ಗಾ	–	–

1	2	3	4	5
8		ಹಾಸನ	8	3,23,100
9		ಕೆನರಾ	11	2,40,637
10		ಕೊಡಗು	8	3,35,500
11		ಮಂಗಳೂರು	26	11,01,594
12		ಮೈಸೂರು	47	15,45,824
13		ಶಿವಮೊಗ್ಗ	51	13,15,500
		ಒಟ್ಟು	**196**	**70,34,597**

ANNEXURE

Details of Vehicles auctioned and Revenue realised during 2009-10 and 2010-11 (Circlewise)

Sl. No.	*Year*	*Name of the circle*	*No. of Cases Auctioned*	*Revenue realized by the Govt. (in Rs.)*
1		Bangalore	-	-
2		Belgaum	-	-
3		Bellary	-	-
4		Chamarajanagar	-	-
5		Chickmagalur	15	3,90,114
6		Dharwad	12	7,35,455
7		Gulbarga	-	-
8		Hassan	-	-
9		Kanara	6	1,43,581
10		Kodagu	29	15,73,400
11		Mangalore	9	4,31,313
12		Mysore	13	2,42,305
13		Shimoga	49	17,02,300
		Total	**133**	**52,18,468**

Sl. No.	Year	Name of the circle	No. of Cases Auctioned	Revenue realized by the Govt. (in Rs.)
1		Bangalore	-	-
2		Belgaum	-	-
3		Bellary	-	-
4		Chamarajanagar	No	-
5		Chickmagalur	16	7,41,430
6		Dharwad	29	14,31,012
7		Gulbarga	-	-
8		Hassan	8	3,23,100
9		Kanara	11	2,40,637
10		Kodagu	8	3,35,500
11		Mangalore	26	11,01,594
12		Mysore	47	15,45,824
13		Shimoga	51	13,15,500
		Total	**196**	**70,34,597**

ಕಾಮಗಾರಿಗೆ ನೀಡಿದ ಮಂಜೂರಾತಿ ವಿವರ

55 (5) ಶ್ರೀ ವಸಂತ ಬಂಗೇರ (ಬೆಳ್ತಂಗಡಿ):– ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 2010–11 ಮತ್ತು 2011–12ರ ಸಾಲಿನಲ್ಲಿ RIDF-XVI ಅಡಿ (Rural Infrastructure Development Fund) ಎಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ.

ಆ) ಎಷ್ಟು ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ;

ಇ) ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)?